ಅಜ್ಜ ಹಾಸಿಗೆ ಹಿಡಿದಿದ್ದಾನೆ.

ಉಸಿರು ಚೆಲ್ಲುವ ಮುನ್ನ ಠಾಕ್ರೀಯೊಡನೆ ಅವನಿಗೆ ಮಾತನಾಡುವುದಿದೆ. ಸಂಬಂಧಿಯೂ ಅಲ್ಲದ ಜಾತಿಯವಳೂ ಆಗಿರದ ಕೇವಲ ಮನೆಯ ಆಳು ಆಗಿದ್ದವಳೊಡನೆ ಅಜ್ಜನಿಗೆ ಏನು ಮಾತನಾಡುವುದಿದೆ ಎಂಬುದು ಕೂತುಹಲದ ಸಂಗತಿಯಾಗಿತ್ತು. ಆದರೆ ಮನೆಯ ಜನರು ಮಾತ್ರ ಅದನ್ನು ವಿಶೇಷ ಎಂಬ ರೀತಿಯಲ್ಲಿ ನೋಡದೆ ಸಹಜವಾಗಿ ಇರುವುದು ನನಗೆ ಇನ್ನೂ ವಿಚಿತ್ರವೆನಿಸಿತ್ತು. ಅವರೆಲ್ಲರೂ ಅಜ್ಜನ ಮತ್ತು ಠಾಕ್ರೀಯ ಕುರಿತು ನನಗಿಂತ ಹೆಚ್ಚು ತಿಳಿದುಕೊಂಡಿರುವಂತವರಾಗಿದ್ದಂತೆ ಕಂಡಿತು. ಇದು ಅವಳ ವಿಳಾಸ ತಲುಪುವ ಪ್ರಯಾಣದುದ್ದಕ್ಕೂ ನನ್ನನ್ನು ಕಾಡತೊಡಗಿತು.

* * *

ನನಗೆ ಹದಿನಾಲ್ಕೋ ಹದಿನೈದೋ ವರ್ಷವಿರಬಹುದು. ಆ ದೃಶ್ಯ ನನಗಿನ್ನೂ ನೆನಪಿದೆ. ಮನೆಯ ಪಡಸಾಲೆಯಲ್ಲಿ ಮೊರ ಹಿಡಿದು ಜೋಳ ಹಸನು ಮಾಡುತ್ತ ಅಜ್ಜಿಯೊಂದಿಗೆ ಠಾಕ್ರೀ ಕುಳಿತಿದ್ದಳು. ದಷ್ಟ ಪುಷ್ಟವಾಗಿದ್ದ ತೊಡೆ ತೋಳುಗಳ ಎತ್ತರದ ನಿಲುವಿನ ಕೆಂಪನೆ ಹೆಂಗಸು. ಸದಾ ಅಡಿಕೆ ಎಲೆ ತಿನ್ನುತ್ತಿದ್ದ ಅವಳ ಹಲ್ಲುಗಳು ಕೆಂಪುಗಟ್ಟಿ ಹೋಗಿದ್ದವು. ತುಟಿಗಳಿಗೆ ಕೆಂಪಡರಿಕೊಂಡು ಒಂಥರಾ ಆಕರ್ಷಕವಾಗಿತ್ತು. ಹಾಗೆ ಅದೊಂದು ಉಗುಳು ಬಟ್ಟಲಿನಂತೆಯೂ ಕಾಣುತ್ತಿತ್ತು.

ಯ್ಯೇ ಇರಾಣಿಯರಿಗೆ ಹುಟ್ಟಿದೋಳೆ... ಎಂದು ಅಜ್ಜಿ ಸಹಜವಾಗಿ ಅವಳಿಗೆ ಮೂದಲಿಸುತ್ತಿದ್ದಳು. ಅಜ್ಜಿಗೂ ಅವಳ ಚೆಲುವು ನಿಲುವಿನ ಬಗ್ಗೆ ಈರ್ಷೆ ಇದ್ದ ಹಾಗಿತ್ತು. ಹಾಗೆ ಬೈದದ್ದನ್ನು ಠಾಕ್ರೀ ಅಷ್ಟೇ ಸಹಜವಾಗಿ ತೆಗೆದುಕೊಂಡು ಅಜ್ಜಿಯ ಕರೆಗೆ ಓಗೊಡುತ್ತಿದ್ದಳು. ನನಗೆ ಮಾತ್ರ ಬೇಸರವಾಗುತ್ತಿತ್ತು.

ಅಡಕೆ ಎಲೆಯ ಸರಕೀನ ಚೀಲದ ಕಸಿ ಹಿಡಿದು ಸರಕ್ಕನೆ ಎಳೆದು ಎತ್ತಲೊ ನೋಡುತ್ತ ಅದರ ಕುತ್ತಿಗೆಗೆ ಗಂಟು ಬಿಗಿದು ಹೊಟ್ಟೆ ಮೇಲಿನ ಸೀರೆಯನ್ನು ಬದಿಗೆ ಸರಿಸಿ ಚೀಲವನ್ನು ಬದ್ದಿಯಲ್ಲಿ ಸಿಗಿಸಿಕೊಳ್ಳುತ್ತ ಎರಡು ಬೆರಳನ್ನು ತುಟಿಗಳಿಗೆ ಒತ್ತಿಕೊಂಡು ಪಿಚಕ್ ಎಂದು ಉಗುಳುವ ನೋಟ... ಸಿನಿಮಾವೊಂದರ ಫಿಲ್ಮ್ ಸ್ಟಿಲ್ ಹಾಗೆ ಕಣ್ಣಿಗೆ ಕಟ್ಟಿದೆ. ಹಾಗೆ ಮಾಡುವಾಗ ಹೊಕ್ಕುಳು ಪೂರ್ತಿ ಕಾಣುತ್ತಿತ್ತು. ಈ ಕಾರಣಕ್ಕಾಗಿ ಕೆಲವರು ಅವಳಿಂದ ಎಲೆಅಡಿಕೆ ಕೇಳುವ ನೆಪ ಮಾಡಿಕೊಂಡು ಎದಿರು ಕೂಡುತ್ತಿದ್ದರು. ಇದು ನನಗೆ ಅರ್ಥವಾಗಿ ಹಿಂಸೆಯಾಗುತ್ತಿತ್ತು. ಅವಳು ಮಾತ್ರ ನಿರಾತಂಕ. ಯಾರಿಗೂ ಇಲ್ಲ ಅಂದವಳೆ ಅಲ್ಲ. ಎದುರಿಗೆ ಯಾರಿದ್ದಾರೆ ಏನಂದುಕೊಳ್ಳಬಹುದು ಎಂಬ ಪರಿವೆ ಅವಳಿಗಿರುತ್ತಿರಲಿಲ್ಲ. ಇದನ್ನು ಅವಳಿಗೆ ತಿಳಿಸಿ

